ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1725
2)	ಮಾನ್ಯ ಸದಸ್ಯರ ಹೆಸರು	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3)	ಉತ್ತರಿಸಬೇಕಾದ ದಿನಾಂಕ	23/03/2020
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಸರ್ಕಾರಿ ಐ.ಟಿ.ಐ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಿರಿಯ ತರಬೇತಿ ಅಧಿಕಾರಿಗಳಿಗೆ (ಜೆ.ಟಿ.ಓ) ನಿಗದಿತ ಸಮಯದಲ್ಲಿ ತರಬೇತಿ ನೀಡದಿರಲು ಕಾರಣಗಳೇನು: (ವಿವರ ನೀಡುವುದು)	ವಿವಿಧ NSTI (National Skill Training Institute) ಗಳಲ್ಲಿ ಲಭ್ಯ ಸೀಟುಗಳ ಅನ್ವಯ ಹಾಗೂ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ತರಬೇತಿದಾರರಿಗೆ ತರಬೇತಿಗೆ ತೊಂದರೆಯಾಗದಂತೆ ಎಲ್ಲಾ ಸಾಲಿನಲ್ಲಿಯೂ ಇಲಾಖೆಯ ಕಿರಿಯ ತರಬೇತಿ ಅಧಿಕಾರಿಗಳನ್ನು ಜೇಷ್ಠತೆ ಅನ್ವಯ CITS (Craft Instructor Training Scheme) ತರಬೇತಿಗೆ ನಿಯೋಜಿಸಲಾಗಿದೆ. ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಿರಿಯ ತರಬೇತಿ ಅಧಿಕಾರಿಗಳಿಗೆ CITS ತರಬೇತಿಗಾಗಿ ಡಿಜಿಇಟಿ ನವದೆಹಲಿ ಅಂಗಸಂಸ್ಥೆಗಳಾದ ವಿವಿಧ NSTI (National Skill Training Institute) ಗಳಿಗೆ ಕಿರಿಯ ತರಬೇತಿ ಅಧಿಕಾರಿಗಳ ಸಂಬಂಧಪಟ್ಟ ವೃತ್ತಿಗಳಲ್ಲಿ ಡಿಇಟಿ ಸಂಸ್ಥೆಗಳಿಗೆ ಹಂಚಿಕೆಯಾಗುವ ಸ್ಥಾನಗಳನ್ವಯ ಪ್ರತಿ ವರ್ಷವು ತರಬೇತಿಗೆ ನಿಯೋಜಿಸಲಾಗುತ್ತದೆ. DGE&T – 19/07(4)/2014 – CD Dated: 22nd May 2014 ಅನ್ವಯ CITS ತರಬೇತಿಗೆ ಆನ್‌ಲೈನ್ ಮುಖಾಂತರ ಪರೀಕ್ಷೆ ಬರೆದು ಅರ್ಹರಾಗುವ ಖಾಸಗಿ ಅಭ್ಯರ್ಥಿಗಳಿಗೆ ಶೇ.75. ಮತ್ತು ಡಿಇಟಿ ಸಂಸ್ಥೆಗಳಿಂದ ನಿಯೋಜಿಸುವ ಕಿರಿಯ ತರಬೇತಿ ಅಧಿಕಾರಿಗಳಿಗೆ ಶೇ.25. ಮಾತ್ರ ಸ್ಥಾನ ಹಂಚಿಕೆ ಮಾಡುತ್ತಾರೆ. ಪ್ರತಿ ವೃತ್ತಿಗೆ ಹಂಚಿಕೆಯಾಗುವ ಶೇ.25. ಸ್ಥಾನಗಳಲ್ಲಿ ದಕ್ಷಿಣ ಭಾರತದ ಮತ್ತು ಉತ್ತರ ಭಾರತದ ಡಿಇಟಿ ಸಂಸ್ಥೆಗಳ ಕಿರಿಯ ತರಬೇತಿ ಅಧಿಕಾರಿಗಳಿಗೆ ತರಬೇತಿಗಾಗಿ ಅನುವು ಮಾಡಿಕೊಡುತ್ತಿರುವುದರಿಂದ ನಮ್ಮ ರಾಜ್ಯಕ್ಕೆ ಕಡಿಮೆ ಸ್ಥಾನಗಳ ಹಂಚಿಕೆಯಾಗುತ್ತಿದ್ದು, ಅದರನ್ವಯ ಕಿರಿಯ ತರಬೇತಿ ಅಧಿಕಾರಿಗಳನ್ನು ತರಬೇತಿಗೆ ನಿಯೋಜಿಸಲಾಗುತ್ತಿದೆ.
ಆ)	ತರಬೇತಿ ನಂತರ ಸೇವೆಯನ್ನು ಪರಿಗಣಿಸಿ, 10 ವರ್ಷದ ಕಾಲಮಿತಿ ಬಡ್ತಿಯನ್ನು ನೀಡುತ್ತಿರುವುದರಿಂದ ಅವರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್‌ಡಿ 105 ಎಸ್‌ಆರ್‌ಪಿ (ಸಿ.ಎಸ್.ಸಿ) 82 ದಿನಾಂಕ: 08/06/1983 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 60 ಎಸ್‌ಆರ್‌ಪಿ 84 ದಿನಾಂಕ: 23/08/1984 ರಂತೆ ಕಿರಿಯ ತರಬೇತಿ ಅಧಿಕಾರಿಗಳ ಹುದ್ದೆಗಳಿಗೆ ಅರ್ಹ ವಿದ್ಯಾರ್ಹತೆ, ಇಲಾಖಾ ಪರೀಕ್ಷೆ ಮತ್ತು ತರಬೇತಿಗಳಲ್ಲಿ ಒಂದು ವರ್ಷದ ಸಿಐಟಿಎಸ್ ತರಬೇತಿಯನ್ನು ಕಡ್ಡಾಯಗೊಳಿಸಿರುವುದರಿಂದ ಸಿಐಟಿಎಸ್ ತರಬೇತಿಯಲ್ಲಿ ಉತ್ತೀರ್ಣರಾದ ದಿನಾಂಕಕ್ಕೆ / ಪೂರ್ಣಗೊಳಿಸಿದ ದಿನಾಂಕಕ್ಕೆ ಕಾಲಬದ್ಧ ಮುಂಬಡ್ತಿಯನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

--2

ಇ)	ಸೇವೆಗೆ ಸೇರಿದ ದಿನದಿಂದ ಸೇವೆಯನ್ನು ಪರಿಗಣಿಸಿ 10 ವರ್ಷದ ಕಾಲಮಿತಿ ಬಡ್ತಿಯನ್ನು ನೀಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ:	ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕಿರಿಯ ತರಬೇತಿ ಅಧಿಕಾರಿ ಹುದ್ದೆಗೆ ನೇರ ನೇಮಕಾತಿ ಕಲ್ಪಿಸಿದ್ದು, 2 ವರ್ಷಗಳ ಕಾಲ ಖಾಯಂ ಪೂರ್ವ ಅವಧಿಯಲ್ಲಿದ್ದು, ಈ ಅವಧಿಯಲ್ಲಿ ಭಾರತ ಸರ್ಕಾರದ ಅಂಗ ಸಂಸ್ಥೆಗಳಾದ Craftsman Training Institute (CTI) ಹಾಗೂ Advanced Training Institute (ATI) ಗಳಲ್ಲಿ ಒಂದು ವರ್ಷದ ತರಬೇತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಸದರಿ ಅಂಗ ಸಂಸ್ಥೆಗಳಿಂದ ಪ್ರತಿ ವರ್ಷವು ತರಬೇತಿಗೆ ಹಂಚಿಕೆ ಮಾಡಲಾಗುವ ಸ್ಥಾನಗಳ ಆಧಾರದ ಮೇಲೆ ಕಿರಿಯ ತರಬೇತಿ ಅಧಿಕಾರಿಗಳನ್ನು ತರಬೇತಿಗೆ ನಿಯೋಜಿಸಲಾಗುವುದು. ತದನಂತರ ಖಾಯಂ ಪೂರ್ವ ಅವಧಿ ಘೋಷಣೆ ಮಾಡಲು ಸಾಧ್ಯವಾಗುವುದು. ಇದಲ್ಲದೇ ಈ ಹುದ್ದೆಗಳಿಗೆ ಕಾಲಬದ್ಧ ಮುಂಬಡ್ತಿಯನ್ನು ನೀಡಬೇಕಾದಲ್ಲೂ ಸಹ ಸದರಿ ಸಿಬ್ಬಂದಿಗೆ ಮುಂಬಡ್ತಿಗೆ ಬೇಕಾದ ಎಲ್ಲಾ ಅರ್ಹತೆಗಳನ್ನು ಹೊಂದಿರಬೇಕಾಗಿರುತ್ತದೆ.
ಈ)	2010 ನೇ ಸಾಲಿನಲ್ಲಿ ನೇಮಕಗೊಂಡ ಜೆ.ಟಿ.ಓ ಗಳ ನೇಮಕಾತಿ ಸಂಬಂಧ ಇದುವರೆವಿಗೂ ಅವರ ಪರೀಕ್ಷಾ ಪೂರ್ವ ಅವಧಿ (ಪ್ರೊಬೆಷನರಿ ಪೀರಿಯಡ್) ಘೋಷಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಹೌದು.
ಉ)	ಯಾವ ಕಾಲಮಿತಿಯಲ್ಲಿ ಸದರಿ ಪರೀಕ್ಷಾ ಪೂರ್ವ ಅವಧಿಯನ್ನು (ಪ್ರೊಬೆಷನರಿ ಪೀರಿಯಡ್) ಘೋಷಿಸಲಾಗುವುದು?	2010ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಉದ್ಯೋಗ ಮತ್ತು ತರಬೇತಿ ಇಲಾಖೆಗೆ 402 ಕಿರಿಯ ತರಬೇತಿ ಅಧಿಕಾರಿಗಳ ನೇಮಕಾತಿ ಮಾಡಿದ್ದು, ನೇಮಕಾತಿ ಸಮಯದಲ್ಲಿ ನಕಲಿ ಅನುಭವ ಪ್ರಮಾಣ ಪತ್ರ ಸಲ್ಲಿಸಿರುವರೆಂಬ ದೂರಿನ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 81 ಸಿಐಡಿ 2017 ದಿನಾಂಕ: 05/12/2017 ರಂದು ಸಿ.ಓ.ಡಿ / ಸಿ.ಐ.ಡಿ ತನಿಖೆಗೆ ವಹಿಸಿ ಆದೇಶಿಸಿದೆ. ಪೊಲೀಸ್ ಮಹಾನಿರ್ದೇಶಕರು, ಸಿ.ಐ.ಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು, ರವರು ಬೆಂಗಳೂರು ನಗರ ಸಿದ್ದಾಪುರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:30/2017 ಕಲಂ–463, 465, 468, 471, 420 ಐ.ಪಿ.ಸಿ ಪ್ರಕರಣ ತನಿಖೆಯನ್ನು ನಡೆಸಿ, ದಿನಾಂಕ:31/01/2020 ರಂದು ಒಳಾಡಳಿತ ಇಲಾಖೆಗೆ ವರದಿಯನ್ನು ನೀಡಿರುತ್ತಾರೆ. ಒಳಾಡಳಿತ ಇಲಾಖೆಯಿಂದ ವರದಿ / ಅಭಿಪ್ರಾಯ ನಿರೀಕ್ಷಿಸಲಾಗಿದೆ. ಪ್ರಸ್ತುತ ಸದರಿ ಕಿರಿಯ ತರಬೇತಿ ಅಧಿಕಾರಿಗಳಿಗೆ ವೇತನವನ್ನು ಮಾತ್ರ ನೀಡಲಾಗುತ್ತಿದ್ದು, ಪರಿವೀಕ್ಷಣಾ ಅವಧಿ ಘೋಷಣೆ ಹಾಗೂ ವಾರ್ಷಿಕ ಮುಂಬಡ್ತಿ ಮುಂತಾದವುಗಳನ್ನು ಒಳಾಡಳಿತ ಇಲಾಖೆಯಿಂದ ವರದಿ / ಅಭಿಪ್ರಾಯ ಸ್ವೀಕೃತವಾದ ನಂತರ ಪರಿಶೀಲಿಸಿ ನಿರ್ಧಾರ ತೆಗೆದುಕೊಂಡ ನಂತರ ಅರ್ಹ ಅಭ್ಯರ್ಥಿಗಳ ಖಾಯಂ ಪೂರ್ವ ಅವಧಿಯನ್ನು ಘೋಷಿಸಲು ಹಾಗೂ ಇನ್ನಿತರೆ ಸೌಲಭ್ಯಗಳನ್ನು ನೀಡಲು ನಿಯಮಾನುಸಾರ ಪರಿಶೀಲಿಸಲಾಗುವುದು.

ಸಂಖ್ಯೆ: ಕೌಉಜೀಇ 21 ಕೈತಪ್ರ 2020

(ಡಾ.ಸಿ.ಎನ್.ಅಶ್ವತ್ಥ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು